# ಪ್ರಧಾನ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಮಾಗಡಿ
## ಕ್ರಿಮಿನಲ್ ಪ್ರಕರಣ ಸಂಖ್ಯೆ ಃ 7168 / 2022

**ಚಾಸಾ ಃ– 01 / ಪ್ರಾಸಾ ಃ– 01**

| | |
|---|---|
| ಹೆಸರು | ಗೌರಿಶಂಕರ್ |
| ತಂದೆ ಹೆಸರು | ಶಿವಣ್ಣ |
| ವಯಸ್ಸು | 50 |
| ಉದ್ಯೋಗ | ವ್ಯಾಪಾರ |
| ವಿಳಾಸ | ಜುಟ್ಟನಹಳ್ಳಿ |

**ದಿನಾಂಕಃ 17.01.2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ ಃ– ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ** ಃ–

ಚಾಸಾ–2 ರಿಂದ 6 ರವರು ಪರಿಚಯ ಇರುತ್ತಾರೆ. ಆರೋಪಿಗಳು ನನ್ನ ದೊಡ್ಡಪ್ಪನ ಮಕ್ಕಳು. ದಿನಾಂಕ 28.08.2022 ರಂದು ಮಧ್ಯಾಹ್ನ 2.30 ರ ಸಮಯದಲ್ಲಿ ಜುಟ್ಟನಹಳ್ಳಿ ಗ್ರಾಮದಲ್ಲಿ ನಮ್ಮ ತಂದೆಯವರಿಗೆ ಸೇರಿದ ಸರ್ವೆ ನಂ.92/2 ರಲ್ಲಿ ಜಮೀನು ಇದ್ದು ಅದರ ಪೈಕಿ 2 ಗುಂಟೆ ಜಮೀನು ಆರೋಪಿಗಳ ಹೆಸರಿನಲ್ಲಿ ಇದ್ದು ಸದರಿ 2 ಗುಂಟೆ ಜಮೀನನ್ನು ನನ್ನ ತಂದೆಯವರೆ ಕೊಟ್ಟಿದ್ದು ಸದರಿ 2 ಗುಂಟೆ ಜಮೀನು ಹೊರತು ಪಡಿಸಿ 2 ಎಕರೆ 23 ಗುಂಟೆ ಜಮೀನಿಗೆ ತಂತಿ ಬೇಲಿ ಹಾಕಲು ಕಲ್ಲುಕೂಚವನ್ನು ಹಾಕಿದ್ದೆವು. ಆಗ ಆರೋಪಿಗಳು ಏಕಾಏಕಿ ಬಂದು ಕಂಬಗಳನ್ನು ಮುರಿದುಹಾಕಿರುತ್ತಾರೆ. ಏಕೆ ಈ ರೀತಿ ಮಾಡುತ್ತೀರಿ ಎಂದು ಕೇಳಿದಾಗ ಅವಾಚ್ಯ ಶಬ್ದಗಳಿಂದ ಬೈಯ್ದು ಸಿದ್ದಲಿಂಗಯ್ಯ, ಶಿವಣ್ಣ ಹಾಗೂ ಸಿದ್ದಲಿಂಗಯ್ಯನ ಮಕ್ಕಳು ಮುಖೇಶ್ , ಗಂಗಾಧರ್ ಮತ್ತು ಶಿವಣ್ಣ ರವರ ಮಕ್ಕಳು ನನಗೆ ಕಲ್ಲಿನಿಂದ ಹಲ್ಲೆ ಮಾಡಿರುತ್ತಾರೆ ಹಾಗೂ ನನ್ನ ಮೂಗಿಗೆ ಹಲ್ಲೆ ಮಾಡಿದ್ದು ಮೂಗಿನಿಂದ ರಕ್ತ ಬರುತ್ತಿತ್ತು. ನನ್ನ ತಾಯಿ ರತ್ನಮ್ಮ ಮತ್ತು ಸರೋಜಮ್ಮ ಮತ್ತು ಕುಮಾರ್ ನನ್ನನ್ನು ಬಿಡಿಸಿರುತ್ತಾರೆ. ನನ್ನ ಅಣ್ಣನ

ಮಗಳು ಸ್ವಲ್ಪ ಭಾಗವನ್ನು ಮೋಬೈಲ್ ನಲ್ಲಿ ಫೋಟೋ ಮಾಡಿರುತ್ತಾರೆ. ಆರೋಪಿಗಳು ಹಲ್ಲೆ ಮಾಡಿ ಜೀವದ ಬೆದರಿಕೆ ಹಾಕಿರುತ್ತಾರೆ. ನಂತರ ನಾನು ಸರ್ಕಾರಿ ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆದಿರುತ್ತೇನೆ. ನಂತರ ಠಾಣೆಗೆ ಹೋಗಿ ದೂರನ್ನು ಕೊಟ್ಟಿರುತ್ತೇನೆ. ಈಗ ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ದೂರನ್ನು ನಿಪಿ–1 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ–1(ಎ) ಎಂದು ಗುರುತಿಸಲಾಯಿತು.

ದೂರನ್ನು ಕೊಟ್ಟ ಮಾರನೆ ದಿನ ಪೋಲಿಸರು ಸ್ಥಳಕ್ಕೆ ಬಂದು ಬೆಳಿಗ್ಗೆ 10.00 ರಿಂದ 11.00 ಗಂಟೆಯವರೆಗೆ ಮಹಜರನ್ನು ಜರುಗಿಸಿರುತ್ತಾರೆ. ಆ ಸಮಯದಲ್ಲಿ ಜಯಣ್ಣ , ಗುರುಪ್ರಸಾದ್ ಮತ್ತು ಪೋಲಿಸ್ ಸಿಬ್ಬಂದಿಯವರು ಇದ್ದರು. ಮಹಜರ್ ಸಮಯದಲ್ಲಿ ಕಲ್ಲು ಮತ್ತು ಕಾಡುಜಾತಿಯ ದೊಣ್ಣೆಯನ್ನು ಜಪ್ತಿ ಪಡಿಸಿಕೊಂಡಿರುತ್ತಾರೆ. ಈಗ ಸಾಕ್ಷಿಗೆ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಮಹಜರನ್ನು ನಿಪಿ–2 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ–2(ಎ) ಎಂದು ಗುರುತಿಸಲಾಯಿತು. ಈಗ ಸಾಕ್ಷಿಯು ಮಹಜರ್ ಸಮಯದಲ್ಲಿ ತೆಗೆಸಿದ ಫೋಟೋಗಳನ್ನು ನೋಡಿ ಗುರುತಿಸಿದ್ದು ನಿಪಿ–3 ಮತ್ತು ನಿಪಿ–04 ಎಂದು ಗುರುತಿಸಲಾಯಿತು. ಸದರಿ ಕಲ್ಲುಕಂಬಗಳನ್ನು ಕಿತ್ತುಹಾಕಿದ್ದರಿಂದ ಅಂದಾಜು ರೂ.40–50 ಸಾವಿರ ನಷ್ಟವಾಗಿರುತ್ತದೆ. ಈ ಸಂಬಂಧ ಪೋಲಿಸರಿಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ. ಆರೋಪಿಗಳನ್ನು ನೋಡಿದರೆ ಗುರುತಿಸುತ್ತೇನೆ. ಈಗ ಸಾಕ್ಷಿಯು ನ್ಯಾಯಾಲಯದಲ್ಲಿರುವ 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. 2 ನೇ ಆರೋಪಿಯ ಗುರುತಿಸುವಿಕೆಗೆ ಆರೋಪಿ ಪರ ವಕೀಲರಿಂದ ಯಾವುದೇ ತಕರಾರು ಇರುವುದಿಲ್ಲ.

**ಈ ಹಂತದಲ್ಲಿ ಮುಂದುವರೆದ ಮುಖ್ಯ ವಿಚಾರಣೆಯನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.** **ಓ. ಹೇ. ಕೇ. ಸ. ಇ. ಎ. ಓಪ್ಪಿರುತ್ತಾರೆ,**

**ಪ್ರ. ನ್ಯಾ. ದಂ. ಮತ್ತು ಜೆ. ಎಂ. ಎಫ್. ಸಿ. ಮಾಗಡಿ.**